ಶ್ರೀ ಕೆ. ಅಭಯಚಂದ್ರ: ಪರ್ಯಾಯ ರಸ್ತೆ ಮಾಡುವುದು ಒಳ್ಳೆಯದು. ದಕ್ಷಿಣ ಕನ್ನಡ ಜಿಲ್ಲೆಯವರು ದ್ವೀಪದಲ್ಲಿ ಇದ್ದಹಾಗಿದ್ದೇವೆ.

ಶ್ರೀ ಸಿ.ಎಂ. ಉದಾಸಿ: ರಾಷ್ಟ್ರೀಯ ಹೆದ್ದಾರಿಗೆ ಬೇಕಾಗಿರುವಂಥ ಹಣವನ್ನು ಕೇಂದ್ರ ಸರ್ಕಾರದವರೇ ಕೊಡಬೇಕಾಗುತ್ತದೆ. ಇದನ್ನು ವೀರಪ್ಪ ಮೊಯ್ಲಿಯವರ ಗಮನಕ್ಕೆ ತರುವಂಥ ಕೆಲಸ ಮಾಡಿದ್ದೇವೆ, ಆಸ್ಕರ್ ಫರ್ನಾಡಿಸ್‌ರವರ ಗಮನಕ್ಕೆ ತರುವಂಥ ಕೆಲಸ ಮಾಡಿದ್ದೇವೆ, ಕೇಂದ್ರದ ಭೂ ಸಾರಿಗೆ ಸಚಿವರ ಗಮನಕ್ಕೆ ತರುವಂಥ ಕೆಲಸ ಮಾಡಿದ್ದೇವೆ. ಅವರು ಕೊಡಲಿಲ್ಲವೆಂದು ನಾವು ದೂರುವಂಥ ಕೆಲಸವಲ್ಲ. ಪ್ರಯತ್ನ ನಡೆಯುತ್ತಿದೆ. ಅತಿ ಶೀಘ್ರದಲ್ಲಿ ಆಗುತ್ತದೆನ್ನುವ ಭರವಸೆಯನ್ನು ಇಟ್ಟುಕೊಂಡಿದ್ದೇವೆ. ಅಲ್ಲಿಯವರೆಗೆ motorable ಆಗಿ ಮಾಡಬೇಕಾದಂಥ ವ್ಯವಸ್ಥೆಯಲ್ಲಿ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆ.

ಉಪಾಧ್ಯಕ್ಷರು: ಮಾನ್ಯ ಸಚೇತಕರು ಕೂಡ ಪ್ರಯತ್ನ ಮಾಡಿ. ಕೇಂದ್ರ ಸಚಿವರು ನಿಮ್ಮ ಆತ್ಮೀಯ ಮಿತ್ರರು.

ಆ. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲಮಂಡಳಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 4ನೇ ಪಟ್ಟಿಯಲ್ಲಿರುವ 111 ಪ್ರಶ್ನೆಗಳ ಪೈಕಿ 100 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು: ಮಂಡಿಸಲಾಯಿತು.

(ಅನುಬಂಧ–1)

ಶ್ರೀ ಎಸ್. ಸುರೇಶ್ ಕುಮಾರ್: ನಾಡಗೌಡರವರು ಬಂಡಲ್ ಬರುತ್ತದೆ, ಅದರಲ್ಲಿ 4–5 ಪ್ರಶ್ನೆಗಳಿಗೆ ಮಾತ್ರ ಮಿಸ್ ಆಗಿರುತ್ತದೆ ಎಂದು ಹೇಳಿದರು. ಇವತ್ತು 111 ಪ್ರಶ್ನೆಗಳ ಪೈಕಿ 100 ಪ್ರಶ್ನೆಗಳಿಗೆ ಉತ್ತರ ಬಂದಿದೆ. ಅದನ್ನು ಇಲ್ಲಿ ಮಂಡಿಸುತ್ತಿದೇನೆ. ಉಳಿದ ಪ್ರಶ್ನೆಗಳಿಗೆ ಉತ್ತರಗಳನ್ನು ದೊರಕಿದ ನಂತರ ತಲುಪಿಸುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ: ಅವು ದೊರಕುವುದೇ ಇಲ್ಲ.

ಶ್ರೀ ಎಸ್. ಸುರೇಶ್ ಕುಮಾರ್: Time ಕೇಳಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ: ನಾನು ಕೂಡ ಅಂಥ ಪ್ರಶ್ನೆಗಳನ್ನು ಕೇಳುತ್ತಿದ್ದೆ. ಬಹಳಷ್ಟು ಪ್ರಶ್ನೆಗಳಿಗೆ ಉತ್ತರ ಸರ್ಕಾರದಿಂದ ಬರುವುದಿಲ್ಲ. ಅದನ್ನು ತರಿಸಿಕೊಡುವ ಜವಾಬ್ದಾರಿಯನ್ನು ಸರ್ಕಾರ ಹೊರಬೇಕು. ಎಲ್ಲಿ controversy ಇರುತ್ತದೆ ಅಂಥ ಕಡೆ ಅವರು ಉತ್ತರ ಕೊಡುವುದಿಲ್ಲ. ಅಂಥ ಕಡೆ ಉತ್ತರ ತರಿಸಿ ಕೊಡುವಂಥ ಜವಾಬ್ದಾರಿ ಯಾರದು? ಬಂದಾಗ ಕೊಡುತ್ತೇನೆಂದರೆ ಉತ್ತರ ಬರುವುದೇ ಇಲ್ಲ.

ಶ್ರೀ ಎಸ್. ಸುರೇಶ್ ಕುಮಾರ್: ಕೆಲವು ಪ್ರಶ್ನೆಗಳಿಗೆ ಉತ್ತರ ಬರುವುದಿಲ್ಲ, ಒಪ್ಪಿಕೊಳ್ಳುತ್ತೇನೆ. ಆದರೆ, controversy ಇರುವ ಪ್ರಶ್ನೆಗಳಿಗೆ ಉತ್ತರ ಬರುವುದಿಲ್ಲವೆನ್ನುವುದನ್ನು ನಾನು ಒಪ್ಪುವುದಿಲ್ಲ. ನಿನ್ನೆ ವಿಧಾನ ಪರಿಷತ್ತಿನಲ್ಲಿ ಕೆಲವು ಪ್ರಶ್ನೆಗಳಿಗೆ ಉತ್ತರ ಕೊಟ್ಟಿದ್ದೇವೆ. ನಾವು ಯಾವುದೇ ಮುಚ್ಚುಮರೆಯಿಲ್ಲದೆ ಉತ್ತರ ಕೊಡುತ್ತಿದ್ದೇವೆ. ಕೆಲವು ಪ್ರಶ್ನೆಗಳಿಗೆ ಉತ್ತರ ಏನು ಬಂದಿಲ್ಲ ತರಿಸಿ ಕೊಡುತ್ತೇನೆ.

4. ವರದಿಯನ್ನೊಪ್ಪಿಸುವುದು

ಶ್ರೀ ಎಲ್.ಎ. ರವಿ ಸುಬ್ರಮಣ್ಯ (ಬಸವನಗುಡಿ) (ಶ್ರೀ ಎಂ.ಕೆ. ಪಟ್ಟಣಶೆಟ್ಟಿಯವರು ಸಾರ್ವಜನಿಕ ಉದ್ಯಮಗಳ ಸಮಿತಿಯ ಅಧ್ಯಕ್ಷರು ಅವರ ಪರವಾಗಿ): ಮಾನ್ಯ ಉಪಾಧ್ಯಕ್ಷರೆ, ಸಾರ್ವಜನಿಕ ಉದ್ಯಮಗಳ ಸಮಿತಿಯ ಸದಸ್ಯನಾಗಿ 2010–11ನೇ ಸಾಲಿನ ಸಮಿತಿಯ ಸಭೆಗಳಲ್ಲಿ ಚರ್ಚೆಯಾಗಿ ಅನುಮೋದಿಸಿದ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ ಮತ್ತು ಮೈಸೂರು ಕಾಗದ ಕಾರ್ಖಾನೆ ನಿಗಮ ನಿಯಮಿತಕ್ಕೆ ಸಂಬಂಧಿಸಿದ ಕ್ರಮವಾಗಿ 124 ಮತ್ತು 125ನೇ ವರದಿಗಳನ್ನು ಸಭೆಗೆ ಒಪ್ಪಿಸುತ್ತೇನೆ.

ಉಪಾಧ್ಯಕ್ಷರು: ವರದಿಯನ್ನೊಪ್ಪಿಸಲಾಯಿತು.

5. ಶಾಸನ ರಚನೆ

(ಅ) ವಿಧೇಯಕವನ್ನು ಮಂಡಿಸುವುದು

ಕರ್ನಾಟಕ ಜಲಸಾರಿಗೆ ಮಂಡಳಿ ವಿಧೇಯಕ, 2011

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಜೆ. ಕೃಷ್ಣ ಪಾಲೆಮಾರ್ (ಬಂದರು ಮತ್ತು ಒಳನಾಡು ಜಲಸಾರಿಗೆ, ಜೀವಿಶಾಸ್ತ್ರ ಮತ್ತು ಪರಿಸರ, ಮೀನುಗಾರಿಕೆ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು): ಮಾನ್ಯ ಅಧ್ಯಕ್ಷರೆ, 2011ನೇ ಸಾಲಿನ ಕರ್ನಾಟಕ ಜಲಸಾರಿಗೆ ಮಂಡಳಿ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.